**ಓಎಸ್. ನಂ.*85/2022***

**ಪಿಡಬ್ಲೂ:*02***

**ಇಂದು ದಿನಾಂಕ:*22.11.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಂ.ಸಿ.ಹೆಚ್. ವಕೀಲರಿಂದಃ</u>**

ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ರೇಷನ್ ಕಾರ್ಡ್ ಇದೆ. ರೇಷನ್ ಕಾರ್ಡ್ ನಲ್ಲಿ ನಾನು, ನನ್ನ ಪತ್ನಿ ಮತ್ತು ನಮ್ಮ ನಾಲ್ಕು ಜನ ಮಕ್ಕಳ ಹೆಸರು ಇದೆ. ಮಂಡಿಗೌಡರ ಹೆಸರಿನಲ್ಲಿಯೂ ರೇಷನ್ ಕಾರ್ಡ್ ಇದೆ. ನನ್ನ ತಂದೆ ಹೆಸರಿನಲ್ಲಿ ಇರುವ ಜಮೀನಿನ ಮೇಲೆ ಅವರು ಸಾಲ ಪಡೆಯುತ್ತಿದ್ದಾರೆ ಎಂದರೆ ಸರಿ. ನಮ್ಮ ತಂದೆ ಕಣಗಾಲು, ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ಸಾಲ ಪಡೆಯುತ್ತಿದ್ದಾರೆ, ಆದರೆ ಎಷ್ಟು ವರ್ಷದಿಂದ ಸಾಲ ಪಡೆಯುತ್ತಿದ್ದಾರೆ ಗೊತ್ತಿಲ್ಲ. ಸಾಲದ ಎಲ್ಲಾ ವ್ಯವಹಾರಗಳನ್ನು ನಮ್ಮ ತಂದೆಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುವುದನ್ನು ಉಪವಿಭಾಗಾಧಿಕಾರಿ ರವರ ಮುಂದೆ ಪ್ರಶ್ನೆ ಮಾಡಿರುವುದು ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ನನ್ನ ತಂದೆ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿದ್ದೆ. ಆ ದಾಖಲೆಗಳು ಎಲ್ಲಾ ಸತ್ಯವಾಗಿ ಇದೆ. ಜಯಲಕ್ಷ್ಮಿ ನನ್ನ ತಂದೆ ವಿರುದ್ಧ ಕೇಸು ಹಾಕಿದ್ದರು. ನಿ.ಪಿ.6 ರ ಪ್ರಕಾರ ಮಂಡಿಗೌಡ ಮನುಗನಹಳ್ಳಿಯಲ್ಲಿ ವಾಸ ಇರುವುದಾಗಿ ವಿಳಾಸ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಒ.ಎಸ್.93/2005 ರಲ್ಲಿ ನಾನು, ನನ್ನ ತಂದೆ ಮತ್ತು ಇತರರು ಜಂಟಿಯಾಗಿ ಲಿಖಿತ ಹೇಳಿಕೆ ಸಲ್ಲಿಸಿದ್ದೇವು ಎಂದರೆ ಸುಳ್ಳು. ಈ ದಾವೆಯಲ್ಲಿ ಪ್ರತಿವಾದಿಗಳು ನನ್ನ ತಂಗಿಯ ಮಕ್ಕಳು ಅಂತ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು 2022 ರಲ್ಲಿ ಮಂಡಿಗೌಡರನ್ನು ಹೊಡೆದು ಮಂಡಿಗೌಡರ ಆಸ್ತಿ ನಮಗೂ ಬರಬೇಕು ಅಂತ ಗಲಾಟೆ ಮಾಡಿದರು. ಆದ್ದರಿಂದ ಈ ಕೇಸು ಹಾಕಿದ್ದಾರೆ. 6-7 ವರ್ಷಗಳ ವರೆಗೂ ನಾನು ಮನುಗನಹಳ್ಳಿಯಲ್ಲಿ ವಾಸವಿರಲಿಲ್ಲ ಎಂದರೆ ಸುಳ್ಳು. ಪ್ರತಿವಾದಿಗಳು ಗಲಾಟೆ ಮಾಡಿದ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿಲ್ಲ. ಗ್ರಾಮದಲ್ಲಿ ಪಂಚಾಯ್ತಿ ಮಾಡಿಲ್ಲ. ದಾವಾ ಆಸ್ತಿಯ ಪೈಕಿ 4 ಎಕರೆ 11 ಗುಂಟೆಯಲ್ಲಿ ಪ್ರತಿವಾದಿಗಳು ಮತ್ತು ಅವರ ತಾಯಿ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ಮಂಡಿಗೌಡರ ಸ್ವಾಧೀನಕ್ಕೆ ಯಾವುದೇ ಅಡಚಣೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವಾಧೀನಕ್ಕೆ ನಾನು ಮತ್ತು ನನ್ನ ತಂದೆ 2021 ರಲ್ಲಿ ಅಡಿ ಪಡಿಸಿಲ್ಲ ಎಂದರೆ ಸುಳ್ಳು.

ಪ್ರತಿವಾದಿಗಳ ತಾಯಿಯನ್ನು ನನ್ನ ತಂದೆ ಕೃಷ್ಣೇಗೌಡರ ಜೊತೆ ಮದುವೆ ಮಾಡಿ ಅವರ ಮನೆಯಲ್ಲಿಯೇ ಇರಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ತಂದೆಗೆ ಹೊಡೆದಿರುವುದನ್ನು ನಾನೇ ನೋಡಿದ್ದೇನೆ. ನಾನು ಮತ್ತು ನನ್ನ ಹೆಂಡತಿ ಮಕ್ಕಳು ಬಿಡಿಸಿದ್ದೇವೆ. 1987-88 ರಿಂದಲೂ ಪ್ರತಿವಾದಿಗಳು ಸ್ವಾಧೀನ ಇರುವ ಜಮೀನನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**